ಹಾಸನ ಹಾಲು ಒಕ್ಕೂಟ ನಿಗಮ ನಿಯಮಿತ ಚುನಾವಣೆ.

918(1317) ಶ್ರೀ ಬಿ. ಶಿವರಾಮು (ಯಲಹಂಕ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಹಾಲು ಒಕ್ಕೂಟ ನಿಗಮ ನಿಯಮಿತ ಚುನಾವಣೆಗೆ 1998-99ರಲ್ಲಿ ನಡೆದಿರುವ ಬಗ್ಗೆ ಏನಾದರೂ ದೂರುಗಳು ಸರ್ಕಾರಕ್ಕೆ ಬಂದಿರುತ್ತದೆಯೇ?

ಆ) ಚುನಾವಣಾ ವೇಳಾಪಟ್ಟಿಯನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಸಕಾಲದಲ್ಲಿ ಒದಗಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮತದಾರ ಪಟ್ಟಿಯನ್ನು ಮನವಿ ಸಲ್ಲಿಸಿದವರಿಗೆ ಕೊಡಲಾಗುತ್ತದೆಯೇ? ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು?

ಅ) ಇಲ್ಲ

ಆ) ಇಲ್ಲ

ಇ) ಹೌದು

ಮಂಗಳೂರು ಬಸ್ ನಿಲ್ದಾಣದಲ್ಲಿ ರಿಸರ್ವೇಶನ್ ಮಾಡಲು ಕಂಪ್ಯೂಟರೀಕೃತ ವ್ಯವಸ್ಥೆ.

919(1288) ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರು ಬಸ್ ನಿಲ್ದಾಣದಲ್ಲಿ ಬೇರೆ ಊರುಗಳಿಗೆ ರಿಟರ್ನ್ ಜರ್ನಿಗೆ ರಿಸರ್ವೇಶನ್ ಮಾಡಲು ಅನುಕೂಲವಾಗುವಂತೆ ಕಂಪ್ಯೂಟರೀಕೃತ ವ್ಯವಸ್ಥೆಯನ್ನು ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು? ಅದನ್ನು ಯಾವಾಗ ಮಾಡಲಾಗುವುದು?

ಆ) ಮಂಗಳೂರು ವಲಯದಲ್ಲಿ 4 ಲಕ್ಷ ಕಿ.ಮೀ.ಗಿಂತ ಜಾಸ್ತಿ ಓಡಿದ ಬಸ್‌ಗಳ ಸಂಖ್ಯೆ ಎಷ್ಟು? ಅದನ್ನು ಬದಲಾಯಿಸಲು ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಮಂಗಳೂರು ಬಸ್ ನಿಲ್ದಾಣದಲ್ಲಿ ಬೇರೆ ಊರುಗಳಿಗೆ ಗಣಕೀಕೃತ ಮುಂಗಡ ಆಸನ ಕಾದಿರಿಸುವಿಕೆ ವ್ಯವಸ್ಥೆ ಆಗಸ್ಟ್ 92 ರಿಂದ ಪ್ರಾರಂಭವಾಗಿದ್ದು, ದಿನಾಂಕ 13ನೇ ಮಾರ್ಚ್ 99 ರಿಂದ ಪ್ರಾಯೋಗಿಕವಾಗಿ ವಿ ಸಾಟ್ ಉಪಗ್ರಹ ಮಾಧ್ಯಮದ ಮೂಲಕ